ಜೆಎಸ್‌ಎಸ್ ಮಹಾವಿದ್ಯಾಪೀಠ
# ಜೆಎಸ್‌ಎಸ್ ಮಹಿಳಾ ಕಾಲೇಜು
ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಂಯೋಜಿತ, ನ್ಯಾಕ್‌ನಿಂದ B+ (CGPA: 2.74) ಮಾನ್ಯತೆ ಪಡೆದಿದೆ
**ಕೊಳ್ಳೇಗಾಲ – 571 440 ಚಾಮರಾಜನಗರ ಜಿಲ್ಲೆ**

☎: 08224-252149 jsscwk@gmail.com www. jsscwkgl.org

ಕೊಳ್ಳೇಗಾಲ: 21.3.2025 ಜೀವನದಲ್ಲಿ ಯಾವುದರ ಅವಶ್ಯಕತೆ ಯಾವಾಗ ಬೀಳಬಹುದು ಎಂದು ಊಹಿಸಲು ಸಾಧ್ಯವಿಲ್ಲ. ವಿಮೆಯ ಮೂಲಕ ಜನರು ಹಣಕಾಸಿನ ನಷ್ಟವನ್ನು ತಪ್ಪಿಸಬಹುದು ಮತ್ತು ಆರ್ಥಿಕ ರಕ್ಷಣೆ ಪಡೆಯಬಹುದು. ಇಂದು ಹಲವು ವಿವಿಧ ವಿಮೆಗಳಿವೆ. ಜೀವ ವಿಮೆಯು ಜನರ ಜೀವನಕ್ಕೆ ಬಹಳ ಪ್ರಯೋಜನಕಾರಿಯಾಗಿದೆ ಎಂದು ಮೈಸೂರು ವಿಮಾ ಸಂಸ್ಥೆಯ ಗೌರವಾನ್ವಿತ ಕಾರ್ಯದರ್ಶಿಯಾದ ಶ್ರೀ ಎಸ್ ಶ್ರೀಧರ ರವರು ತಿಳಿಸಿದರು.

ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಮೈಸೂರು ವಿಮಾ ಸಂಸ್ಥೆಯ ಸಹಯೋಗದೊಂದಿಗೆ ಐಕ್ಯೂಎಸಿ ಹಾಗೂ ವಾಣಿಜ್ಯ ಮತ್ತು ವ್ಯವಹಾರ ನಿರ್ವಹಣಾ ವಿಭಾಗದ ವತಿಯಿಂದ ಆಯೋಜಿಸಿದ್ದ **"ವಿಮಾ ಜಾಗೃತಿ & ಉದ್ಯೋಗಾವಾಕಶಗಳು"** ಕುರಿತ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

ಮೈಸೂರು ವಿಮಾ ಸಂಸ್ಥೆಯ ಸದಸ್ಯರಾದ ಶ್ರೀ ಎಸ್ ಬಿ ಬಲರಾಮ್‌ರವರು ಮಾತನಾಡಿ ಜೀವ ವಿಮೆ, ಆರೋಗ್ಯ ವಿಮೆ, ಕಾರು ವಿಮೆ, ಶಿಕ್ಷಣ ವಿಮೆ ಹೀಗೆ ವಿವಿದ ವಿಮೆಗಳ ಬಗ್ಗೆ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು.

ಮತ್ತೋರ್ವ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ್ದ ಮೈಸೂರು ವಿಮಾ ಸಂಸ್ಥೆಯ ಸದಸ್ಯರಾದ ಶ್ರಿ ಆರ್ ಸುಬ್ರಮಣ್ಯ, ಇವರು ವಿದ್ಯಾರ್ಥಿಗಳಿಗೆ ಪದವಿ ಮುಗಿದ ಬಳಿಕ ಭಾರತದ ವಿಮಾ ನಿಯಂತ್ರಣ ಪ್ರಾಧಿಕಾರ ನಡೆಸುವ ಏಜೆಂಟ್ ಪರೀಕ್ಷೆಯನ್ನು ತೆಗೆದುಕೊಂಡು ವಿಮಾ ಕ್ಷೇತ್ರವನ್ನು ಉದ್ಯೋಗವಾಗಿ ಸ್ವೀಕರಿಸುವುದು ಹಾಗೂ ಜನರೊಂದಿಗೆ ಕೌಶಲ್ಯದಿಂದ ಉತ್ತಮ ವ್ಯವಹಾರ ನಡೆಸುವುದು ಹೇಗೆ ಎಂದು ತಿಳಿ ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯರಾದ ಡಾ. ಹೆಚ್ ಎಸ್ ಕೊಂಗಳಪ್ಪ ಮಾತನಾಡಿ ಭಾರತದಲ್ಲಿ ವಿಮಾ ಉದ್ಯಮವು ಗಮನಾರ್ಹ ಬೆಳೆವಣಿಗೆ ಪಥದಲ್ಲಿದೆ. ಮುಂದಿನ ದಿನಗಳಲ್ಲಿ ಜಾಗತಿಕವಾಗಿ ಅತಿ ದೊಡ್ಡ ಮಾರುಕಟ್ಟೆಯಾಗಿ ವಿಮಾ ಕ್ಷೇತ್ರ ನಿಲ್ಲುತ್ತದೆ ಎಂದು ಹೇಳಿದರು.

ವೇದಿಕೆಯಲ್ಲಿ ಐಕ್ಯೂಎಸಿ ಸಂಚಾಲಕರು ಹಾಗೂ ವಾಣಿಜ್ಯ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಮಮತ ಎಸ್ ರವರು ಉಪಸ್ಥಿತರಿದ್ದರು.

ಕಾರ್ಯಗಾರದ ಉದ್ಘಾಟನೆ ಕಾರ್ಯಕ್ರಮ. ಚಿತ್ರದಲ್ಲಿ ಪ್ರಾಚಾರ್ಯರಾದ ಡಾ.ಹೆಚ್ ಎಸ್ ಕೊಂಗಳಪ್ಪ, ಶ್ರೀ ಬಿ ಬಲರಾಮ್, ಶ್ರೀ ಎಸ್ ಶ್ರೀಧರ ಗೌರವಾನ್ವಿತ ಕಾರ್ಯದರ್ಶಿ ವಿಮೆ ಸಂಸ್ಥೆ, ಮೈಸೂರು, ಶ್ರಿ ಆರ್ ಸುಬ್ರಮಣ್ಯ, ಸದಸ್ಯರು, ವಿಮೆ ಸಂಸ್ಥೆ, ಮೈಸೂರು ಹಾಗೂ ಐಕ್ಯೂಎಸಿ ಸಂಚಾಲಕರಾದ ಶ್ರೀಮತಿ ಮಮತ ಎಸ್




ಶ್ರೀ ಎಸ್ ಶ್ರೀಧರ ಗೌರವಾನ್ವಿತ ಕಾರ್ಯದರ್ಶಿ ವಿಮೆ ಸಂಸ್ಥೆ, ಮೈಸೂರು ರವರು ಉದ್ಘಾಟನಾ ಭಾಷಣ ಮಾಡುತ್ತಿರುವುದು. ಚಿತ್ರದಲ್ಲಿ ಶ್ರೀ ಬಿ  ಬಲರಾಮ್, ಪ್ರಾಚಾರ್ಯರಾದ ಡಾ.ಹೆಚ್ ಎಸ್ ಕೊಂಗಳಪ್ಪ, ಶ್ರೀ ಆರ್ ಸುಬ್ರಮಣ್ಯ, ಸದಸ್ಯರು, ವಿಮೆ ಸಂಸ್ಥೆ, ಮೈಸೂರು ಹಾಗೂ ಐಕ್ಯೂಎಸಿ ಸಂಚಾಲಕರಾದ ಶ್ರೀಮತಿ ಮಮತ ಎಸ್




ಶ್ರೀ ಬಿ ಬಲರಾಮ್‌ರವರು ಮಾತನಾಡುತ್ತಿರುವುದು. ಚಿತ್ರದಲ್ಲಿ ಶ್ರೀ ಎಸ್ ಶ್ರೀಧರ್, ಪ್ರಾಚಾರ್ಯರಾದ ಡಾ.ಹೆಚ್ ಎಸ್ ಕೊಂಗಳಪ್ಪ, ಶ್ರಿ ಆರ್ ಸುಬ್ರಮಣ್ಯ, ಸದಸ್ಯರು, ವಿಮೆ ಸಂಸ್ಥೆ, ಮೈಸೂರು ಹಾಗೂ ಐಕ್ಯೂಎಸಿ ಸಂಚಾಲಕರಾದ ಶ್ರೀಮತಿ ಮಮತ ಎಸ್

